
ಮನಸ್ಸು ಎರಡನ್ನೂ ಹಗುರಾಗಿಸಿದಳು.

* * *

ರಾತ್ರಿಯಿಡೀ ಕಣ್ಣೀರು ಸುರಿಸಿ ಶರ್ವಾಣಿಯ ಕಣ್ಣುಗಳೆರಡೂ ಕೆಂಡದುಂಡೆಯಾಗಿದ್ದವು. ಬದುಕಿನಲ್ಲಿ ಸವಾಲುಗಳನ್ನು ಸ್ವೀಕರಿಸುವ ತನ್ನ ಸ್ವಭಾವವೇ ತನಗೆ ಮುಳುವಾಯಿತೇನೋ ಎಂದೆನಿಸಿತು ಅವಳಿಗೆ. ಅಮಾಯಕ ಮತ್ತು ಮುಗ್ಧನೂ ಆದ ತನ್ನ ಗಂಡನ ಮೇಲೆ ಅವನ ಆಫೀಸಿನಲ್ಲಿ ಸ್ಟೆನೋ ಕಮ್ ಟೈಪಿಸ್ಟ್ ಆಗಿ ಕೆಲಸ ಮಾಡುತ್ತಿರುವ ಸಾಗರಿಕಾಗೆ ಮನಸ್ಸಾಗಿದೆ ಎನ್ನುವ ಗುಟ್ಟು ರಟ್ಟಾದದ್ದೇ ಶರ್ವಾಣಿಗೆ ಹಸಿವು ನೀರಡಿಕೆ ದೂರಾದವು. ಹಾಸಿಗೆಗೆ ಮೈಚಾಚಿದರೆ ನಿದ್ದೆ ಹತ್ತಿರ ಸುಳಿಯುತ್ತಿಲ್ಲ. ಮಲಗಿದ್ದ ನೀಲಾಂಜನನ ಕಡೆಗೊಮ್ಮೆ ದೃಷ್ಟಿ ಬೀರಿದರೆ ಅವನು ಈ ಪ್ರಪಂಚಕ್ಕೂ ತನಗೂ ಯಾವ ಸಂಬಂಧವಿಲ್ಲವೇನೋ ಎನ್ನುವಂತೆ ಗಾಢವಾದ ನಿದ್ದೆಯಲ್ಲಿ ಮುಳುಗಿಹೋಗಿರುತ್ತಿದ್ದ.

ನೀಲಾಂಜನ ಯಾವ ವಿಷಯವನ್ನೂ ಶರ್ವಾಣಿಯಿಂದ ಮುಚ್ಚಿಟ್ಟವನಲ್ಲ. ಆಫೀಸಿನಲ್ಲಿ ದಿನಪೂರ್ತಿ ನಡೆದ ಸಂಗತಿಗಳ ಬಗ್ಗೆ ಮನೆಗೆ ಬಂದವನೇ ಚಾಚೂ ತಪ್ಪದೆ ಅವಳಿಗೆ ವರದಿ ಒಪ್ಪಿಸುತ್ತಿದ್ದ. ಅದೊಂದು ದಿನ ಊಟದ ವೇಳೆ ಆಫೀಸಿನಲ್ಲಿ ಮಹಿಳಾ ಸಹೋದ್ಯೋಗಿಗಳು ವಿರಾಮವಾಗಿ ಹರಟುತ್ತಿರುವಾಗ ಹೆಡ್ ಕ್ಲರ್ಕ್ ಸರಳಾ ದೇಶಪಾಂಡೆ, 'ಐವತ್ತರ ನಂತರ ಗಂಡಸರಿಗೆ ತಮ್ಮ ಹೆಂಡತಿಯನ್ನು ಹೊರತುಪಡಿಸಿ ಪ್ರಪಂಚದಲ್ಲಿರುವ ಬೇರೆ ಎಲ್ಲ ಹೆಂಗಸರೂ ತ್ರಿಲೋಕ ಸುಂದರಿಯರಾಗಿ ಕಾಣಿಸುವರೆಂದು, ಹೊರಗೆ ಮೇಯುವ ಚಾಳಿ ಬೆಳೆಸಿಕೊಂಡು ಹೆಂಡತಿಯೆದುರು ಏನೂ ಗೊತ್ತಿಲ್ಲದ ಸಂಭಾವಿತರಂತೆಯೂ ನಿರ್ಲಿಪ್ತರಂತೆಯೂ ನಡೆದುಕೊಳ್ಳುವರೆಂದು, ಹೆಂಡತಿ ಪಕ್ಕದಲ್ಲಿ ಮಲಗಿ ಕರೀನಾನೋ ಕತ್ರಿನಾಳನ್ನೋ ಕನವರಿಸುವರೆಂದು' ಭಯಂಕರ ಗುಟ್ಟೊಂದನ್ನು ಹೊರಗೆಡವಿದಾಗ, ಪಕ್ಕದ ಟೇಬಲ್‌ನಲ್ಲಿದ್ದ ನೀಲಾಂಜನ – 'ಹಾಗಾದರೆ ನೀವು ಸಲ್ಮಾನ್ ಖಾನ್‌ನೋ ಹೃತಿಕನನ್ನೋ ಕನವರಿಸ್ತೀರಿ ಅಂದಂಗಾಯ್ತು' ಎಂದು ನುಡಿದು ಮಹಿಳಾ ಸಹೋದ್ಯೋಗಿಗಳನ್ನು ಬೆಚ್ಚಿಬೀಳಿಸಿದ್ದ. ವಿಷಯ ಜನರಲ್ ಮ್ಯಾನೇಜರ್ ರಾಮನಾಥ ಚಿದ್ರಿ ಸಾಹೇಬರವರೆಗೂ ಹೋಯಿತು. 'ನೋಡ್ರಮ್ಮ ನೀಲಾಂಜನ ತುಂಬ ಅಮಾಯಕ. ಸ್ವಲ್ಪ ಬರ್ಥ್ ಡಿಫೆಕ್ಟ್ ಅಷ್ಟೆ. ವಿಷಯ ಸುಮ್ನೆ ಬೆಳೆಸಬೇಡಿ' ಎಂದು ಸಮಸ್ಯೆ ಇತ್ಯರ್ಥಗೊಳಿಸಿದ್ದರು. ನಡೆದ ಘಟನೆಯನ್ನು ನೀಲಾಂಜನ ಹೇಳಿದಾಗ ಶರ್ವಾಣಿ ಹೊಟ್ಟೆ ಬಿರಿಯುವಂತೆ ನಕ್ಕಿದ್ದಳು. ನಕ್ಕು ನಕ್ಕು ಅವಳ ಕಣ್ಣುಗಳಿಂದ ನೀರು ಧಾರೆಯಾಗಿ ಸುರಿಯುತ್ತಿತ್ತು. ಶರ್ವಾಣಿ ನಕ್ಕಿದ್ದೇಕೆಂದು ಅರ್ಥವಾಗದೆ ನೀಲಾಂಜನ ಅವಳ ಮುಖವನ್ನೇ ನೋಡುತ್ತ ನಿಂತಿದ್ದ.

ಆ ದಿನ ಆಫೀಸಿನ ಲಂಚ್ ರೂಮಿನಲ್ಲಿ ಮಧ್ಯಾಹ್ನ ಊಟದ ಟೇಬಲ್ ಹತ್ತಿರ ಯಾರೂ ಇಲ್ಲದ ವೇಳೆ ಸಾಗರಿಕಾ, ನೀಲಾಂಜನನ್ನು ನೋಡಿ ತನ್ನ ಎಡಗಣ್ಣು ಮಿಟುಕಿಸಿ 'ಐ ಲವ್ ಯು' ಎಂದಿದ್ದಳು. ತನ್ನ ಬಟ್ಟಲುಗಣ್ಣುಗಳನ್ನು ಇನ್ನಷ್ಟು ದೊಡ್ಡದಾಗಿಸಿಕೊಂಡು ಕಣ್ಣು ಮಿಟುಕಿಸದೆ ಅವಳನ್ನೇ ನೋಡುತ್ತಿದ್ದ ನೀಲಾಂಜನನಿಗೆ ಒಳಗೆ ಹೇಗೇಗೋ ಆಯಿತು. ಮನೆಗೆ ಬಂದವನೆ ಶರ್ವಾಣಿ ಹತ್ತಿರ, 'ಸಾಗರಿಕಾಳಂತೆ ನೀನು ಕಣ್ಣು ಮಿಟುಕಿಸಿ ಲವ್ ಯು ಎಂದಿಲ್ಲ' ಎಂದು ತಗಾದೆ ತೆಗೆದ. ನೀಲಾಂಜನನ ಮಾತು ಅರ್ಥವಾಗದೆ ಅವಳಿಗೆ ಎಲ್ಲವೂ ಅಯೋಮಯ, ಅಗೋಚರ ಎನಿಸಿತು. ಆಫೀಸಿನಲ್ಲಿ ನಡೆದ ಸಾಗರಿಕಾ ಪ್ರಕರಣದ ಬಗ್ಗೆ ನೀಲಾಂಜನ ಬಾಯ್ಬಿಟ್ಟಾಗ ನಿಂತ ನೆಲ ಕಂಪಿಸಿದಂತಾಯಿತು. ತನ್ನ ಬದುಕು ಬಿರುಗಾಳಿಗೆ ಸಿಕ್ಕ ತರಗೆಲೆಯಂತೆ ಭಾಸವಾಗಿ ಒಂದು ಕ್ಷಣ ಅಧೀರಳಾದಳು. ಬಹುಪಾಲು ಸಿನಿಮಾಗಳಲ್ಲಿ ನಾಯಕಿಯರು ಪ್ರೀತಿಸಿದ್ದು ಅಮಾಯಕ ಮತ್ತು ಪೆದ್ದ ನಾಯಕನನ್ನೇ ಎನ್ನುವುದು ಶರ್ವಾಣಿಗೆ ಮದುವೆಗಿಂತ ಮುಂಚಿನ ಆ ದಿನಗಳಲ್ಲಿ ವಾರಕ್ಕೆರಡು ಸಿನಿಮಾ ನೋಡಿ ಅರಿವಿತ್ತು. 'ಬೇಟಾ' ಸಿನಿಮಾದಲ್ಲಿ ಮಾಧುರಿಯಂಥ ಅಪ್ರತಿಮ ಸುಂದರಿ ಪೆದ್ದ ನಾಯಕನೆದುರು ಧಕ್ ಧಕ್ ಎಂದು ಎದೆ ಕುಲುಕಿಸಿರುವಾಗ ಸಾಗರಿಕಾಳಂಥ ಕೃಷ್ಣಸುಂದರಿ ನನ್ನ ಗಂಡನಿಗೆ ಗಾಳಹಾಕಿದ್ದರಲ್ಲಿ ಅಚ್ಚರಿಯಿಲ್ಲ



ಎನಿಸಿತು. ಆ ಕ್ಷಣಕ್ಕೆ ಭವಿಷ್ಯ ಅಂಧಕಾರದಲ್ಲಿ ಮುಳುಗಿದಂತಾಗಿ ನಿದ್ದೆ ಹತ್ತಿರ ಸುಳಿಯದೆ ಅವಳ ಮನಸ್ಸು ಒಂದು ರೀತಿಯ ಕ್ಷೋಭೆಯಿಂದ ನರಳಿತು.

* * *

ಮರುದಿನ ನೀಲಾಂಜನನಿಗೆ ಆಫೀಸಿಗೆ ರಜೆ ಹಾಕಿಸಿ ಅವನನ್ನು ನಗರದ ಪ್ರಖ್ಯಾತ ಸೈಕ್ರಿಯಾಟ್ರಿಸ್ಟ್ ಮೂರ್ತಿ ಅವರ ಹತ್ತಿರ ಕೌನ್ಸಿಲಿಂಗ್‌ಗೆ ಕರೆತರುವವರೆಗೆ ಶರ್ವಾಣಿಗೆ ಸಮಾಧಾನವಿರಲಿಲ್ಲ. ಡಾ. ಮೂರ್ತಿ ತಾವೊಬ್ಬರೇ ನೀಲಾಂಜನನೊಂದಿಗೆ ಮಾತನಾಡಬೇಕು, ನೀವು ಸಾಯಂಕಾಲ ಕ್ಲಿನಿಕ್‌ಗೆ ಬನ್ನಿ ಎಂದು ಹೇಳಿ ಕೌನ್ಸಿಲಿಂಗ್ ರೂಮಿನತ್ತ ಹೆಜ್ಜೆ ಹಾಕಿದರು. ನೀಲಾಂಜನನಿಗೆ ಕ್ಲಿನಿಕ್‌ನಿಂದ ನೇರವಾಗಿ ಮನೆಗೆ ಹೋಗುವಂತೆ ತಿಳಿಸಿದ ಶರ್ವಾಣಿ, ಕೆಲಸಕ್ಕೆ ಹೊತ್ತಾಯಿತೆಂದು ಸ್ಕೂಟಿಯನ್ನು ಬ್ಯಾಂಕಿನತ್ತ ಓಡಿಸಿದಳು.

ಸಂಜೆ ಬ್ಯಾಂಕಿನ ಕೆಲಸ ಮುಗಿಸಿ ಡಾ. ಮೂರ್ತಿ ಅವರ 'ಮಾನಸ ಕ್ಲಿನಿಕ್'ನ ಅಂಗಳದಲ್ಲಿಳಿದು ಅವರ ಚೇಂಬರ್ ಪ್ರವೇಶಿಸುವಾಗ ಶರ್ವಾಣಿ ಎದೆ ಜೋರಾಗಿ ಹೊಡೆದುಕೊಳ್ಳುತ್ತಿತ್ತು. ಎದುರು ಕುಳಿತವಳ ಮುಖ ಬಿಳುಚಿಕೊಂಡಿದ್ದು ನೋಡಿ ಶರ್ವಾಣಿ ಹೆದರಿಕೊಂಡಿರುವಳೆಂದು ಡಾ. ಮೂರ್ತಿ ಅವರಿಗೆ ಸ್ಪಷ್ಟವಾಯಿತು. 'ಹೆದರಿಕೊಳ್ಳುವಂಥದ್ದೇನಿಲ್ಲ, ರಿಲ್ಯಾಕ್ಸ್' ಎಂದವರು ಅಲ್ಲಿನ ಪರಿಸರಕ್ಕೆ ಅವಳು ಹೊಂದಿಕೊಳ್ಳಲೆಂದು ಒಂದೆರಡು ನಿಮಿಷ ಮೌನವಾಗಿ ಕುಳಿತರು. ಶರ್ವಾಣಿ ಅಲ್ಲಿನ ಪರಿಸರಕ್ಕೆ ಹೊಂದಿಕೊಂಡಿದ್ದಾಳೆಂದು ಅನಿಸಿದ್ದೇ ಮಾತಿಗೆ ಶುರುವಿಟ್ಟರು. 'ಶರ್ವಾಣಿ, ನೀವು ಯೋಚಿಸಿದ ಹಾಗೆ ಇಲ್ಲಿ ಯಾವ ಸಮಸ್ಯೆಯೂ ಇಲ್ಲ. ನಿಮ್ಮ ಹಸ್ಬೆಂಡ್ ನೀಲಾಂಜನ ತುಂಬ ಮುಗ್ಧ ಸ್ವಭಾವದ ಮನುಷ್ಯ. ಸುಮಾರು ಮೂರು ಗಂಟೆಗಳ ಕಾಲ ಅವರೊಂದಿಗೆ ಮಾತನಾಡಿರುವೆ. ನನ್ನ ಎಲ್ಲ ಪ್ರಶ್ನೆಗಳಿಗೂ ಯಾವ ಮುಚ್ಚುಮರೆಯಿಲ್ಲದೆ ಉತ್ತರಿಸಿದ್ದಾರೆ. ಅವರು ನಮ್ಮೆಲ್ಲರಿಗಿಂತ ಪ್ರಪಂಚವನ್ನು ತುಂಬ ವಿಭಿನ್ನವಾಗಿ ನೋಡುತ್ತಿದ್ದಾರೆ. ತಾವು ನೋಡುತ್ತಿರುವ ಪ್ರಪಂಚ ತಮ್ಮಷ್ಟೇ ಅಮಾಯಕವಾಗಿದೆ ಎಂದು ನಂಬಿದ್ದಾರೆ. ನೀಲಾಂಜನ ಯಾವುದನ್ನೂ ಮನಸ್ಸಿನಲ್ಲಿ ಇಟ್ಟುಕೊಳ್ಳಲ್ಲ. ಒಂದುರೀತಿ ಅವರು ಕನ್ನಡಿ ಇದ್ದಂತೆ. ಕನ್ನಡಿ ತನ್ನೆದುರು ಕಾಣಿಸುವುದನ್ನೆಲ್ಲ ತೋರಿಸಿದರೂ ಯಾವುದನ್ನೂ ತನ್ನೊಳಗೆ ಇಟ್ಟುಕೊಳ್ಳುವುದಿಲ್ಲ ನೋಡಿ, ಹಾಗೆ ನೀಲಾಂಜನ ತಮ್ಮ ಅನುಭವಕ್ಕೆ ಬಂದದ್ದನ್ನೆಲ್ಲ ಯಾವ ಸಂಕೋಚವಿಲ್ಲದೆ ಹೇಳಿಕೊಳ್ಳುತ್ತಾರೆ. ಈ ಕಾರಣದಿಂದಲೇ ಅವರ ಮನಸ್ಸು ತುಂಬ ಆರೋಗ್ಯಪೂರ್ಣವಾಗಿದೆ. ಎಷ್ಟೋ ಗಂಡಸರು ಅದೆಷ್ಟೋ ಸಂಗತಿಗಳನ್ನು ಹೆಂಡತಿಯಿಂದ ಮುಚ್ಚಿಡುತ್ತಾರೆ. ಸಭ್ಯರಂತೆಯೂ ಏನೂ ಗೊತ್ತಿಲ್ಲದ ಅಮಾಯಕರಂತೆಯೂ ವರ್ತಿಸುತ್ತಾರೆ. ಆದರೆ ನಿಮ್ಮ ಗಂಡ ನಿಮ್ಮಿಂದ ಯಾವ ಒಂದು ಸಣ್ಣ ಸಂಗತಿಯನ್ನೂ ಮುಚ್ಚಿಟ್ಟಿಲ್ಲ. ಒಂದು ಮಾತು ನೆನಪಿಟ್ಟುಕೊಳ್ಳಿ ಶರ್ವಾಣಿ, ಎಲ್ಲರೂ ಅನ್ಕೊಂಡಿರೊ ಹಾಗೆ ನೀಲಾಂಜನ ಅಬ್‌ನಾರ್ಮಲ್ ಅಲ್ಲ. ಅವರು ತುಂಬ ನಾರ್ಮಲ್ ಮನುಷ್ಯ. ಅಬ್‌ನಾರ್ಮಲ್ ಆಗಿರೋದು ಈ ಸಮಾಜ, ಐ ಮೀನ್ ಸಮಾಜದಲ್ಲಿರೋ ನಾವುಗಳು. ವಿಚಿತ್ರ ನೋಡಿ, ತುಂಬ ಸಹಜವಾಗಿ ಬದುಕುತ್ತಿರುವ ಮನುಷ್ಯನಿಗೆ ಈ ಸಮಾಜ ಅಬ್‌ನಾರ್ಮಲ್ ಎನ್ನುವ ಹಣೆಪಟ್ಟಿ ಕಟ್ಟುತ್ತೆ. ಖುಷಿ ಪಡಿ, ಇಂಥ ಅಮಾಯಕ ಮತ್ತು ಪ್ರಾಮಾಣಿಕ ಗಂಡ ಸಿಕ್ಕಿರೋದಕ್ಕೆ. ಬೆಸ್ಟ್ ಆಫ್ ಲಕ್ ಫಾರ್ ಯುವರ್ ಫ್ಯೂಚರ್ ಲೈಫ್' ಎಂದು ಮಾತು ಮುಗಿಸಿ ಕೈ ಕುಲುಕಿದ್ದರು ಡಾ. ಮೂರ್ತಿ.

ಆಸ್ಪತ್ರೆಯಿಂದ ಹೊರಬರುವಾಗ ಈ ಮೊದಲಿನ ಆತಂಕ, ಉದ್ವಿಗ್ನತೆಗಳಿಲ್ಲದೆ ಮನಸ್ಸಿನ ಭಾರ ಕಳೆದು ನಿರಾಳತೆಯ ಅನುಭವವಾಗಿ ಶರ್ವಾಣಿ ತುಂಬ ಖುಷಿಯಲ್ಲಿದ್ದಳು. ಅವಳ ಭಾವಕೋಶದ ತುಂಬ ನೀಲಾಂಜನನೇ ತುಂಬಿಕೊಂಡಿದ್ದ. ಸ್ಕೂಟಿಯನ್ನು ಮನೆಯತ್ತ ಓಡಿಸುತ್ತಿದ್ದವಳಲ್ಲಿ ನೀಲಾಂಜನನನ್ನು ಯಾವಾಗ ನೋಡುತ್ತೇನೋ ಎನ್ನುವ ಧಾವಂತ ಮನೆಮಾಡಿತ್ತು.

ಪ್ರತಿಕ್ರಿಯಿಸಿ: **feedback@sudha.co.in**